ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ ದಿನಾಂಕ : DATE : 29/11/19

# ತೆರೆದ ಮಹಾ ಸಂಪುಟ



**15** ಕಾಂಗ್ರೆಸ್/ ಎನ್‌ಸಿಪಿಗೆ ತಲಾ 15 ಸಚಿವ ಸ್ಥಾನ

**13** ಸ್ಪೀಕರ್ ಹುದ್ದೆ ಸೇರಿ 13 ಸ್ಥಾನ ಶಿವಸೇನೆ ಪಾಲು

ಮಹಾರಾಷ್ಟ್ರದ 17ನೇ ಮುಖ್ಯಮಂತ್ರಿಯಾಗಿ ಶಿವಸೇನೆ ಮುಖ್ಯಸ್ಥ ಹಾಗೂ ಮಹಾರಾಷ್ಟ್ರ ಆಘಾಡಿ ಮೈತ್ರಿಕೂಟದ ನಾಯಕ ಉದ್ಧವ್ ಠಾಕ್ರೆ ಗುರುವಾರ ಪ್ರಮಾಣವಚನ ಸ್ವೀಕರಿಸಿದರು. ಮುಂಬೈನ ಶಿವಾಜಿ ಪಾರ್ಕ್ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಭಗತ್ ಸಿಂಗ್ ಕೋಶ್ಯಾರಿ ಪ್ರತಿಜ್ಞಾ ವಿಧಿ ಬೋಧಿಸಿದರು. ಶಿವಸೇನೆಯ ಏಕನಾಥ ಶಿಂಧೆ, ಸುಭಾಷ್ ದೇಸಾಯಿ, ಕಾಂಗ್ರೆಸ್‌ನ ನಿತಿನ್ ರಾವತ್, ಬಾಳಾ ಸಾಹೇಬ್ ತೋರಟ್, ಎನ್‌ಸಿಪಿಯ ಛಗನ್ ಭುಜಬಲ್ ಹಾಗೂ ಜಯಂತ್ ಪಾಟೀಲ್ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ವರದಿ ಪುಟ 10

## ಮೈತ್ರಿ ಅಜೆಂಡಾ

- ರೈತರ ಸಾಲ ಸಂಪೂರ್ಣ ಮನ್ನಾ, ಸ್ಥಳೀಯ ಯುವಕರಿಗೆ ಶೇ.80 ಉದ್ಯೋಗ ಮೀಸಲು
- 1 ರೂ.ಗೆ ಆರೋಗ್ಯ ತಪಾಸಣೆ ಮಾಡುವ ಕ್ಲಿನಿಕ್‌ಗಳ ಆರಂಭ, 10 ರೂ.ಗೆ ಫುಲ್ ಮೀಲ್ಸ್

# ಮಹಾ ಅಘಾಡಿ ಅಜೆಂಡಾ

## ರೈತರ ಸಾಲ ಮನ್ನಾ | ಶೇ. 80 ಉದ್ಯೋಗ ಸ್ಥಳೀಯರಿಗೆ ಮೀಸಲು

**ಮುಂಬೈ:** ಸುಮಾರು ಒಂದು ತಿಂಗಳ ಹಗ್ಗಾಜಗ್ಗಾಟದ ನಂತರ ಶಿವಸೇನೆ, ಎನ್‌ಸಿಪಿ ಮತ್ತು ಕಾಂಗ್ರೆಸ್ ಮೈತ್ರಿಕೂಟದ ಮಹಾರಾಷ್ಟ್ರ ವಿಕಾಸ ಅಘಾಡಿ (ಎಂವಿಎ) ಸರ್ಕಾರ ಗುರುವಾರ ರಚನೆಯಾಗಿದೆ. ಸರ್ಕಾರ ಮುನ್ನಡೆಸಲು ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಅಂತಿಮಗೊಂಡಿದ್ದು, ಪ್ರಮುಖವಾಗಿ

- **1 ರೂಪಾಯಿಯ ಕ್ಲಿನಿಕ್‌ಗಳ ಸ್ಥಾಪನೆ**
- **10 ರೂಪಾಯಿಗೆ ಫುಲ್ ಮೀಲ್ಸ್**

ರೈತರ ಸಂಪೂರ್ಣ ಸಾಲ ಮನ್ನಾ, ಸ್ಥಳೀಯ ಯುವ ಸಮುದಾಯಕ್ಕೆ ಶೇ. 80 ಉದ್ಯೋಗ ಮೀಸಲು, ₹ 1ಕ್ಕೆ ಆರೋಗ್ಯ ತಪಾಸಣೆ ಮಾಡುವ ಕ್ಲಿನಿಕ್‌ಗಳ ಸ್ಥಾಪನೆ, ₹ 10ಕ್ಕೆ ಹೊಟ್ಟೆತುಂಬ ಊಟ (ಫುಲ್ ಮೀಲ್ಸ್) ಅಂಶಗಳನ್ನು ಪ್ರಸ್ತಾಪಿಸ ಲಾಗಿದೆ.

**ತಡೆ ನೀಡಲು ಹೈಕೋರ್ಟ್ ನಕಾರ:** ಉದ್ಧವ್ ಠಾಕ್ರೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸದಂತೆ ತಡೆಯಾಜ್ಞೆ ನೀಡಲು ಬಾಂಬೆ ಹೈಕೋರ್ಟ್‌ನ ಎರಡು ನ್ಯಾಯಪೀಠಗಳು ನಿರಾಕರಿಸಿವೆ. ಪ್ರಮಾಣ ವಚನ ಸಮಾರಂಭಕ್ಕೆ ತಡೆ ನೀಡಬೇಕು ಎಂದು ಕೋರಿ ವಕೀಲರ ಗುಂಪು ಈ ಅರ್ಜಿಗಳನ್ನು ಸಲ್ಲಿಸಿತ್ತು.

### ಮೊದಲ ಸಭೆಯಲ್ಲೇ ಶಿವಾಜಿ ಸ್ಮರಣೆ

ಛತ್ರಪತಿ ಶಿವಾಜಿ ಮಹಾರಾಜರ ರಾಜಧಾನಿಯಾಗಿದ್ದ ರಾಯಗಢ ಕೋಟೆ ಜೀರ್ಣೋದ್ಧಾರಕ್ಕೆ ₹ 20 ಕೋಟಿ ಅನುದಾನ ನೀಡುವ ನಿರ್ಧಾರವನ್ನು ಮೊದಲ ಸಂಪುಟ ಸಭೆಯಲ್ಲೇ ಸಿಎಂ ಉದ್ಧವ್ ಠಾಕ್ರೆ ಕೈಗೊಂಡಿದ್ದಾರೆ. ಎರಡ್ಮೂರು ದಿನದಲ್ಲಿ ರೈತರಿಗೆ ಸ್ಥಿರವಾದ ನೆರವು ಘೋಷಿಸಲಾಗುವುದು ಮತ್ತು ಭಯಭೀತ ರಹಿತ ವಾತಾವರಣ ನಿರ್ಮಿಸಲಾಗುವುದು ಎಂದು ಉದ್ಧವ್ ಠಾಕ್ರೆ ತಿಳಿಸಿದ್ದಾರೆ.

### ಉದ್ಧವ್ ಶಿವಸೇನೆಯ 3ನೇ ಸಿಎಂ

ಐತಿಹಾಸಿಕ ಶಿವಾಜಿ ಪಾರ್ಕ್‌ನಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಉದ್ಧವ್ ಠಾಕ್ರೆ (59) ಪ್ರಮಾಣ ವಚನ ಸ್ವೀಕರಿಸಿದರು. (ಸರದಿ ಪ್ರಕಾರ 29ನೇ ಸಿಎಂ) ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ ಪ್ರಮಾಣ ವಚನ ಬೋಧಿಸಿದರು. ಉದ್ಧವ್ ಸಿಎಂ ಹುದ್ದೆ ಅಲಂಕರಿಸಿದ ಶಿವಸೇನೆಯ ಮೂರನೆಯವರು ಮತ್ತು ಬಾಳಾ ಠಾಕ್ರೆ ಕುಟುಂಬದ ಮೊದಲಿಗರು. ಈ ಹಿಂದೆ ಶಿವಸೇನೆಯ ಮನೋಹರ ಜೋಷಿ (1995) ಮತ್ತು ನಾರಾಯಣ ರಾಣೆ (1999) ಸಿಎಂ ಆಗಿದ್ದರು. ಶಾಸಕರಾಗದೇ ಸಿಎಂ ಆದವರಲ್ಲಿ ಠಾಕ್ರೆ ಒಂಬತ್ತನೆಯವರು.



### ಆರು ಸಚಿವರ ಪ್ರಮಾಣ

ಉದ್ಧವ್ ಠಾಕ್ರೆ ಜತೆಗೆ ಶಿವಸೇನೆ, ಎನ್‌ಸಿಪಿ ಮತ್ತು ಕಾಂಗ್ರೆಸ್‌ನ ತಲಾ ಇಬ್ಬರಂತೆ ಒಟ್ಟು ಆರು ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಶಿವಸೇನೆಯಿಂದ ಏಕನಾಥ್ ಶಿಂಧೆ ಮತ್ತು ಸುಭಾಷ್ ದೇಸಾಯಿ, ಎನ್‌ಸಿಪಿಯಿಂದ ಜಯಂತ್ ಪಟೇಲ್ ಹಾಗೂ ಛಗನ್ ಭುಜಬಲ್, ಕಾಂಗ್ರೆಸ್‌ನಿಂದ ಬಾಳಾಸಾಹೇಬ್ ಥರೋಟ್ ಮತ್ತು ನಿತಿನ್ ರಾವತ್ ಪ್ರಮಾಣ ವಚನ ಸ್ವೀಕರಿಸಿದ ಹಿರಿಯ ನಾಯಕರು. ಆದರೆ, ಉಪಮುಖ್ಯಮಂತ್ರಿ ಎಂದು ಇನ್ನು ಯಾರಿಗೂ ಪದನಾಮ ನೀಡಿಲ್ಲ. ಸಚಿವರಿಗೆ ಖಾತೆಗಳ ಹಂಚಿಕೆಯನ್ನು ಬಹುಮತ ಸಾಬೀತು ಪಡಿಸಿದ ನಂತರ ಹಂಚಿಕೆ ಮಾಡಲಾಗುವುದು ಎಂದು ಎನ್‌ಸಿಪಿ ಮುಖಂಡ ಪ್ರಫುಲ್ ಪಟೇಲ್ ಹೇಳಿದ್ದಾರೆ. ಡಿ. 3ರೊಳಗೆ ಬಹುಮತ ಸಾಬೀತು ಪಡಿಸುವಂತೆ ಗವರ್ನರ್ ಸೂಚಿಸಿದ್ದಾರೆ.

### ಅದ್ದೂರಿಯ ಶಿವರಾಜ್ಯಾಭಿಷೇಕ!

ಉದ್ಧವ್ ಪ್ರಮಾಣ ವಚನ ಸಮಾರಂಭವನ್ನು ಶಿವಸೇನೆ ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕಕ್ಕೆ ಹೋಲಿಸಿದೆ. ವೇದಿಕೆಯಲ್ಲಿ ರಾಜ್ಯ ವಿಧಾನಸಭಾ ಕಟ್ಟಡ ದೊಡ್ಡ ಚಿತ್ರವನ್ನು ಹಾಕಲಾಗಿತ್ತು. 'ಶಿವರಾಜ್ಯಾಭಿಷೇಕ'ದ ಥೀಮ್‌ನಂತೆಯೆ ಬಾಲಿವುಡ್‌ನ ನಿರ್ದೇಶಕ ನಿತಿನ್ ದೇಸಾಯಿ ಅವರ ಒಂದು ಸಾವಿರ ಮಂದಿ ತಂಡ ಈ ವೇದಿಕೆಯನ್ನು ವಿನ್ಯಾಸ ಮಾಡಿತ್ತು. 9 ಸಾವಿರ ಚದರಡಿಯ, ಇದು 30 ಅಡಿ ಎತ್ತರದ ಬೃಹತ್ ವೇದಿಕೆಯನ್ನು ಕಟ್ಟಲಾಗಿತ್ತು. 28 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಪಾರ್ಕ್‌ನ ಹಲವು ಕಡೆ ಉದ್ಧವ್ ರ ತಂದೆ ಬಾಳಾ ಠಾಕ್ರೆ ಮತ್ತು ತಾಯಿ ಮೀನಾತಾಯಿ ಠಾಕ್ರೆ ಅವರ ಪ್ರತಿಮೆ/ ಪೋಸ್ಟರ್‌ಗಳನ್ನು ಇರಿಸಲಾಗಿತ್ತು. 40 ಸಾವಿರ ಕುರ್ಚಿಗಳನ್ನು ಹಾಕಲಾಗಿತ್ತು. ಮೂರು ಲಕ್ಷ ಜನರು ಶಿವಾಜಿ ಪಾರ್ಕ್‌ನಲ್ಲಿ ಸೇರಿದ್ದರು ಎನ್ನಲಾಗಿದೆ. ಎರಡು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗಿತ್ತು. ಡ್ರೋನ್, ಸಿಸಿಟಿವಿ ಕ್ಯಾಮರಾಗಳ ಮೂಲಕ ನಿಗಾ ಇರಿಸಲಾಗಿತ್ತು.

### ಭಾಗವಹಿಸಿದ್ದ ಪ್ರಮುಖರು

ದೇವೇಂದ್ರ ಫಡ್ನವೀಸ್, ಶರದ್ ಪವಾರ್, ಅಜಿತ್ ಪವಾರ್, ಸುಪ್ರಿಯಾ ಸುಲೆ, ಉದ್ಧವ್‌ಪತ್ನಿ ರಶ್ಮಿ, ಮಕ್ಕಳಾದ ಆದಿತ್ಯ (ಶಾಸಕ), ತೇಜಸ್, ಮಧ್ಯಪ್ರದೇಶದ ಸಿಎಂ ಕಮಲನಾಥ್, ಮಲ್ಲಿಕಾರ್ಜುನ ಖರ್ಗೆ, ಅಹ್ಮದ್ ಪಟೇಲ್, ಉದ್ಧವ್ ಸಹೋದರ ರಾಜ್ ಠಾಕ್ರೆ, ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್, ಮುಕೇಶ್ ಅಂಬಾನಿ ಇನ್ನಿತರರು.

ಬಿಜೆಪಿಯಿಂದ ದೇಶ ಗಂಡಾಂತರ ಎದುರಿಸುತ್ತಿರುವ ವಿಷಮ ಪರಿಸ್ಥಿತಿಯಲ್ಲಿ ಎನ್‌ಡಿಎ ಜತೆಗಿನ 3 ದಶಕದ ಸಖ್ಯ ಕಡಿದುಕೊಂಡು ಬಂದ ಶಿವಸೇನೆ, ಎನ್‌ಸಿಪಿ ಮತ್ತು ಕಾಂಗ್ರೆಸ್ ಜತೆಗೂಡಿ ಸರ್ಕಾರ ರಚಿಸಿದೆ. ಇದು ಸ್ಥಿರವಾದ ಆಡಳಿತ ನೀಡಲಿದೆ. ಹೊಸ ಇನಿಂಗ್ಸ್ ಆರಂಭಿಸಿರುವ ಉದ್ಧವ್ ಠಾಕ್ರೆಗೆ ಒಳಿತಾಗಲಿ

| ಸೋನಿಯಾ ಗಾಂಧಿ
ಕಾಂಗ್ರೆಸ್ ಹಂಗಾಮಿ ಅಧ್ಯಕ್ಷೆ